**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆ: 51/2017</u>**

ದಿನಾಂಕ: 14.11.2018
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 14   ಪ್ರಾಸಾ - 12

| | | |
|---|---|---|
| ಹೆಸರು | : | ದಿಲೀಪ್ ಕುಮಾರ್ |
| ತಂದೆಯ/ಗಂಡನ ಹೆಸರು | : | ಮದನ್ ಲಾಲ್ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಕೋಲಾರ |

**<u>ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:</u>**

ನಾನು ಚಿನ್ನಬೆಳ್ಳಿ ವ್ಯಾಪಾರವನ್ನು ಅಮ್ಮವಾರಪೇಟೆ, ಕೋಲಾರ ಇಲ್ಲಿ ಪದ್ಮಾವತಿ ಜ್ಯುವೆಲ್ಲರ್ಸ್ ಎಂಬ ನಾಮಫಲಕದಡಿಯಲ್ಲಿ ಕಳೆದ 25 ವರ್ಷದಿಂದ ಮಾಡುತ್ತಿದ್ದೇನೆ.

2. ನನಗೆ ಸಮೀರ್ ಸುಲ್ತಾನ್ ಮತ್ತು ನಾಜು ಗೊತ್ತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ಸಮೀರ್ ಸುಲ್ತಾನ್ ಇವರನ್ನು ತೋರಿಸಿ ಅವರು ಗೊತ್ತು ಎಂದು ಉತ್ತರಿಸಿದ್ದಾರೆ. ಕಳೆದ ವರ್ಷದ ಅಕ್ಟೋಬರ್ ತಿಂಗಳಿನಲ್ಲಿ ಸಮೀರ್ ಸುಲ್ತಾನ್ ನನ್ನ ಅಂಗಡಿಗೆ ಒಬ್ಬ ಗ್ರಾಹಕನ ರೂಪದಲ್ಲಿ ಬಂದು ಎರಡು ಉಂಗುರ ಮತ್ತು ಒಂದು ಜೊತೆ ಚಿನ್ನದ ಓಲೆಯನ್ನು ರೂ.22,000/- ಅಥವಾ ರೂ.27,000/-ಕ್ಕೆ ಮಾರಾಟ ಮಾಡಿದ್ದಾನೆ.

3. ಆತನಿಗೆ ಬಿಲ್ ನೀಡಿ ಆ ಚಿನ್ನದ ಒಡವೆಗಳನ್ನು ನಾನು ಖರೀದಿ ಮಾಡಿದ್ದೇನೆ. ಖರೀದಿ ಮಾಡಿದ ನಂತರ ರಾಮನಗರದ ಪೊಲೀಸರು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನನ್ನ ಅಂಗಡಿಗೆ ಕರೆದುಕೊಂಡು ಬಂದರು.

4. ಆ ರೀತಿ ಬಂದ 1 ನೇ ಆರೋಪಿ ಚಿನ್ನದ ಒಡವೆಗಳನ್ನು ನನಗೆ ಮಾರಾಟ ಮಾಡಿರುವುದಾಗಿ ತಿಳಿಸಿದ. ಪೊಲೀಸರು ಸದರಿ ಒಡವೆಗಳನ್ನು ವಶಕ್ಕೆ ಪಡೆಯಲು ಬಂದಿದ್ದರು. ನಾನು ಯಾವ ರೀತಿಯಲ್ಲಿ ಆ ಒಡವೆಗಳನ್ನು ಖರೀದಿ ಮಾಡಿದ್ದೇನೆಯೋ ಅದೇ ರೀತಿ ಆ ಒಡವೆಗಳನ್ನು ಪೊಲೀಸರಿಗೆ ಹಸ್ತಾಂತರಿಸಿದ್ದೇನೆ.

5. ಪೊಲೀಸರು ಅವುಗಳನ್ನು ವಶಪಡಿಸಿಕೊಂಡು ಸ್ಥಳದಲ್ಲಿ ಮಹಜರ್ ಮಾಡಿದ್ದಾರೆ. ಆ ಮಹಜರ್‌ಗೆ ನಾನು ರುಜು ಮಾಡಿದ್ದೇನೆ. ಸದರಿ ಮಹಜರ್‌ನ್ನು ನಾನು ಈಗ ನೋಡಿದೆ. ಅದರಲ್ಲಿ ನನ್ನ ರುಜು ಇದೆ. ಸದರಿ ಮಹಜರ್‌ನ್ನು ನಿಶಾನೆ ಪಿ 12 ಮತ್ತು ಸಾಕ್ಷಿಯ ರುಜುವನ್ನು ನಿಶಾನೆ ಪಿ 12(ಎ) ಎಂದು ನಿಶಾನೆ ಮಾಡಲಾಯಿತು.

6. ಆ ರೀತಿ ನಾನು 1 ನೇ ಆರೋಪಿಯಿಂದ ಖರೀದಿ ಮಾಡಿದ್ದ ಒಂದು ಜೊತೆ ಚಿನ್ನದ ಓಲೆಗಳು ಮತ್ತು ಎರಡು ಚಿನ್ನದ ಉಂಗುರಗಳನ್ನು ಈಗ ನೋಡಿದೆ. ಅವುಗಳನ್ನು ಈಗಾಗಲೇ ಮುದ್ದೆಮಾಲು 7, 8 ಮತ್ತು 9 ಎಂದು ನಿಶಾನೆ ಮಾಡಲಾಗಿದೆ. (ಸದರಿ

ಮುದ್ದೆಮಾಲುಗಳನ್ನು ಈ ದಿವಸ ಪ್ರಾಸಾ 1 ರವರು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ) ಸದರಿ ಉಂಗುರ ಮತ್ತು ಓಲೆಗಳು ನಿಶಾನೆ ಪಿ 8 ಫೋಟೋದಲ್ಲೂ ಕೂಡ ಕಂಡುಬರುತ್ತವೆ. ಸಾಕ್ಷಿಯು ನಿಶಾನೆ ಪಿ 8 ನ್ನು ನೋಡಿಕೊಂಡು ಉತ್ತರಿಸಿದ್ದಾರೆ.

7. ಪೊಲೀಸರು ಬಂದ ನಂತರ ನನಗೆ ಆ ಒಡವೆಗಳನ್ನು ಆರೋಪಿ ಸುಲ್ತಾನ್ ಕಳ್ಳತನ ಮಾಡಿಕೊಂಡು ತೆಗೆದುಕೊಂಡು ಬಂದಿದ್ದಾನೆ ಎಂದು ಗೊತ್ತಾಯಿತು. ಸದರಿ ರಶೀದಿ ಪುಸ್ತಕ ನನ್ನ ಬಳಿ ಇದೆ. ಆದರೆ ಅದರ ಪ್ರತಿಯನ್ನು ಪೊಲೀಸರಿಗೆ ಕೊಟ್ಟಿದ್ದೇನೆ. ಸದರಿ ಬಿಲ್‌ನ ಯಥಾ ನಕಲನ್ನು ನಾನು ನೋಡಿದೆ. ಅದರಲ್ಲಿ ನನ್ನ ರುಜು ಇದೆ. ಸದರಿ ದಾಖಲೆಯನ್ನು ಅಭಿಯೋಜನೆಯ ಪರವಾಗಿ ನಿಶಾನೆ ಪಿ 13 ಮತ್ತು ಸಾಕ್ಷಿಯ ರುಜುವನ್ನು ನಿಶಾನೆ ಪಿ 13(ಎ) ಎಂದು ನಿಶಾನೆ ಮಾಡಲಾಯಿತು.

8. ನಾನು ಹೆಸರು ಕೇಳಿದಾಗ 1 ನೇ ಆರೋಪಿ ತನ್ನ ಹೆಸರು ಜಬೀ ಉಲ್ಲಾ ಎಂದು ತಿಳಿಸಿ ಆ ಆಭರಣಗಳನ್ನು ನನಗೆ ಮಾರಾಟ ಮಾಡಿದ್ದಾನೆ ಮತ್ತು ನಿಶಾನೆ ಪಿ 13 ರಶೀದಿಗೂ ಕೂಡ ಜಬೀ ಉಲ್ಲಾ ಎಂದು ರುಜು ಮಾಡಿದ್ದಾನೆ.

<u>**ಪಾಟೀ ಸವಾಲುಃ**</u> **ಶ್ರೀ.ಆರ್.ಎಸ್. ವಕೀಲರಿಂದ – 1 ನೇ ಆರೋಪಿ ಪರವಾಗಿಃ-**

9. 1 ನೇ ಆರೋಪಿ ನನ್ನ ಅಂಗಡಿಗೆ ಬಂದ ನಿಖರವಾದ ತಾರೀಖು ನೆನಪಿಲ್ಲ. ಆದರೆ ಅಕ್ಟೋಬರ್ ತಿಂಗಳಿನಲ್ಲಿ ಬಂದಿದ್ದಾನೆ. ಒಡವೆಗಳನ್ನು ಆರೋಪಿ ಮಾರಾಟ ಮಾಡಿದಾಗ ನಾನು ನಿರ್ವಹಿಸಿರುವ ಲೆಡ್ಜರ್‌ಗೆ ರುಜು ಪಡೆದುಕೊಂಡಿದ್ದಾನೆ. ಆ ಲೆಡ್ಜರ್‌ನ್ನು ನಾನು ಪೊಲೀಸರಿಗೆ ಕೊಟ್ಟಿದ್ದೇನೆ.

10. ಚಿನ್ನದ ಓಲೆಗಳನ್ನು ಮತ್ತು ಉಂಗುರಗಳನ್ನು ಮಾರಾಟ ಮಾಡಲು ಆಗಾಗ ಗ್ರಾಹಕರು ನನ್ನ ಅಂಗಡಿಗೆ ಬರುತ್ತಿರುತ್ತಾರೆ ಎನ್ನುವುದು ಸರಿ. ಆಭರಣಗಳನ್ನು ಎಲ್ಲಿಂದ ತೆಗೆದುಕೊಂಡು ಬಂದಿದ್ದೀರಿ, ರಶೀದಿ ಕೊಡಿ ಎಂದು ನಾನು 1 ನೇ ಆರೋಪಿಯನ್ನು ಕೇಳಿದ್ದೇನೆ. ಆಗ ಆತ ರಶೀದಿ ನನ್ನ ಬಳಿ ಇಲ್ಲ, ಮಗು ಆಸ್ಪತ್ರೆಯಲ್ಲಿ ಇದೆ, ಅರ್ಜೆಂಟಾಗಿ ಹಣ ಬೇಕಾಗಿದೆ ಅದಕ್ಕಾಗಿ ಆಭರಣಗಳನ್ನು ಮಾರಾಟ ಮಾಡುತ್ತಿದ್ದೇನೆ ಎಂದು ತಿಳಿಸಿದ್ದಾನೆ.

11. ಅಕ್ಟೋಬರ್ 2017 ರಲ್ಲಿ 1 ನೇ ಆರೋಪಿ ರಾಮನಗರದ ಜೈಲ್‌ನಲ್ಲಿ ಇದ್ದ ಎನ್ನುವುದು ಸರಿಯಲ್ಲ. ಪೊಲೀಸರ ಮಾತನ್ನು ಕೇಳಿಕೊಂಡು ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

12. ಮುದ್ದೆಮಾಲು 7 ರಿಂದ 9 ರಂತಹ ಒಡವೆಗಳು ಬೇರೆ ಕಡೆಯೂ ಸಿಗುತ್ತವೆ ಎನ್ನುವುದು ಸರಿ. 1 ನೇ ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮುದ್ದೆಮಾಲು 7 ರಿಂದ 9 ನ್ನು ಆರೋಪಿ ನನಗೆ ಮಾರಾಟ ಮಾಡಿಲ್ಲ ಎನ್ನುವುದು ಸರಿಯಲ್ಲ. ನಿಶಾನೆ ಪಿ 13 ರಲ್ಲಿರುವ ಜಬೀಉಲ್ಲಾ ಎಂಬ ರುಜು 1 ನೇ ಆರೋಪಿಯದ್ದು ಅಲ್ಲ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.